ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ **16.04.2024**

ಮುಂದುವರೆದ ಪಾಟೀ ಸವಾಲುಃ ಶ್ರೀ ಡಿ. ಡಿ. ಸಿ ವಕೀಲರಿಂದ

ನನ್ನ ಮಗ ಚಾಸಾ-4 ರವರೊಂದಿಗೆ ಚಾಸಾ-6 ರವರ ಅಂಗಡಿಯ ಬಳಿ ಸಮಯ 11 ಗಂಟೆ 20 ನಿಮಿಷ 49 ಸೆಕೆಂಡ್ ಗೆ ಕೈಯಲ್ಲಿ ದೊಣ್ಣೆಯನ್ನು ಹಿಡಿದುಕೊಂಡು ಬಂದು ಅರೋಪಿಗೆ ಸಮಯ 11 ಗಂಟೆ 21 ನಿಮಿಷ 19 ಸೆಕೆಂಡ್ ವರಗೆ ದೊಣ್ಣೆಯಿಂದ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮೊದಲಿಗೆ ಅರೋಪಿ ಚಾಸಾ-6 ರವರ ಅಂಗಡಿ ಪಕ್ಕದಲ್ಲಿ ನಿಂತಿದಾಗ ಹಲ್ಲೆ ಮಾಡಿ ನಂತರ ಅವರನ್ನು ರಸ್ತೆಗೆ ಎಳೆದು ತಂದು ಕೆಳಗೆ ಬೀಳಿಸಿ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಬೂದು ಬಣ್ಣದ ಟಿ ಶರ್ಟ್ ಹಾಗೂ ನೀಲಿ ಬಣ್ಣದ ಕಳ್ಳಿ ಪಂಚೆಯನ್ನು ಧರಿಸಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರು ಆ ಸಮಯಲ್ಲಿ ನೀಲಿ ಬಣ್ಣದ ಪಂಚೆಯನ್ನು ಧರಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನನ್ನ ಕೈಯಲ್ಲಿದ್ದ ದೊಣ್ಣೆಯನುನ ಚಾಸಾ-4 ರವರು ಕಿತ್ತುಕೊಂಡು ಚಾಸಾ-6 ರವರ ಅಂಗಡಿಯ ಪಕ್ಕದ ಖಾಲಿ ಜಾಗದಲ್ಲಿ ಬಿಸಾಕಿರುತ್ತಾರೆ ಎಂದರೆ ಸರಿಯಲ್ಲ. ಹಲ್ಲೆಯ ನಂತರ ಅರೋಪಿ ಸುದಾರಿಸಿಕೊಂಡು ಸಮಯ 11 ಗಂಟೆ 22 ನಿಮಿಷ 50 ಸೆಕೆಂಡ್ ಗೆ ಅವರ ಅಲ್ಟೋ ಕಾರು ಬಳಿ ತೆರಳಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸಮಯ 11 ಗಂಟೆ 23 ನಿಮಿಷ 20 ಸೆಂಕೆಡ್ ಗೆ ಅರೋಪಿ ಕಾರನ್ನು ತೆಗೆದುಕೊಂಡು ಕುಶಾಲನಗರದ ಕಡೆಗೆ ಹೊರಟರು ಎಂದರೆ ಸರಿಯಲ್ಲ. ಸದರಿ ದೃಶ್ಯಗಳು ಚಾಸಾ-6 ರವರ ಅಂಗಡಿಯಲ್ಲಿರುವ ಸಿಸಿ ಕ್ಯಾಮಾರದಲ್ಲಿ ಸೇರೆಯಾಗಿದೆ ಎಂದರೆ ಸರಿಯಲ್ಲ. ನಂತರ ಅರೋಪಿ ಸಮಯ 12.30 ಕ್ಕೆ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಗೆ ಬಂದು ನನ್ನ ವಿರುದ್ಧ ದೂರು ದಾಖಲಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಂತರ ದೂರನ್ನು ಸ್ವೀಕರಿಸಿ ಪೋಲಿಸ ಠಾಣೆಯಿಂದ ಅರೋಪಿಯನ್ನು ಅಲ್ಲಿಯೇ ಇರುವ ಸಮುದಾಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಅರೋಪಿಯನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಮಾಡಿದ ಹಲ್ಲೆಯಿಂದ

ಅರೋಪಿಯ ಬಲ ಮಣ್ಣಿಕಟ್ಟು, ಬಲ ಕಾಲು, ಎಡ ಮೊಣಕೈ, ಎಡಮೊಣಕಾಲು, ಬೆನ್ನಿನ ಹಿಂಭಾಗ ಮತ್ತು ಬಲ ಕಾಲಿನಲ್ಲಿ ತರಚಿದ ಗಾಯ ಅಗಿರುತ್ತದೆ ಎಂದರೆ ಸರಿಯಲ್ಲ. ಅರೋಪಿ ನನ್ನ ವಿರುದ್ದ ದೂರು ನೀಡಿದ್ದಾರೆ ಎಂದು ಗೊತ್ತಾದ ನಂತರ ಪೋಲಿಸರು ಹಾಗೂ ವೈದ್ಯಾಧಿಕಾರಿಗಳ ಜೊತೆ ಸಾಮೀಲಾಗಿ ಅರೋಪಿಯ ವಿರುದ್ದ ಸುಳ್ಳು ಪ್ರಕರಣ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಅರೋಪಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು ಎಂದರೆ ಸರಿಯಲ್ಲ. ಅರೋಪಿ ತಮ್ಮ ಕಾಲಿನಿಂದ ತುಳಿದು ನನ್ನ ಕಾಲು ಮೂಳೆ ಮುರಿದ ಗಾಯ ಅಗಿದೆ ಎಂದರೆ ಸರಿಯಲ್ಲ. ಅರೋಪಿ ಬಡ್ರಸ್ ಕಾಲಿನಿಂದ ನನ್ನ ಎಡಭುಜಕ್ಕೆ ಗುದ್ದಿ ನೋವು ಪಡಿಸಿದ್ದರು ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ಪೋಲಿಸನವರು ಕುಶಾಲನಗರ ಅಸ್ಪತ್ರೆಯಲ್ಲಿ ತೆಗೆದಿರುವುದಾಗಿ ಗುರುತಿಸಿದ ಮೇರಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಶ್ರೀನಿವಾಸ ಮತ್ತು ಪ್ರವೀಣ್ ಎಂಬ ಪೋಲಿಸ ನವರು ಇದ್ದು ಅವರಿಬ್ಬರ ಪೈಕಿ ಒಬ್ಬರು ಈ ಪೋಟೋವನ್ನು ತೆಗೆದಿರುತ್ತಾರೆ. ಸದರಿ ಪೋಟೋ ತೆಗೆಯುವ ಸಮಯದಲ್ಲಿ ವೈದ್ಯಾಧಿಕಾರಿಗಳು ಇರಲಿಲ್ಲ ಅದರೆ ನರ್ಸ್ ಇದ್ದರು. ನಿಪಿ-1 ನ್ನು ಪೋಲಿಸರು ಬರೆದಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ನ್ನು ನೀಡುವ ವೇಳೆಗೆ ಆ ಸಮಯದಲ್ಲಿ ವೈದ್ಯಾಧಿಕಾರಿಗಳು ಹಾಜರಿಲಿಲ್ಲ ನರ್ಸ್ ಹಾಜರು ಇದ್ದರು. ನಿಪಿ-1 ನ್ನು ದಾಖಲಸಿಸುವ ಮೊದಲು ಹೇಳಿಕೆ ನೀಡಲು ಸರ್ಮಾಥನಿದ್ದೇನೆಂದು ವೈದ್ಯಧಿಕಾರಿಗಳು ದೃಡಿಕರಿಸಿರಲಿಲ್ಲ. ನಾನು ಜಯದೇವ ಅಸ್ಪತ್ರೆಯಲ್ಲಿ ಯಾವುದೇ ಚಿಕಿತ್ತೆ ಪಡೆಯದ ಕಾರಣ ಅ ಸಂಬಂದ ದಾಖಲೆಗಳನ್ನು ಪೋಲಿಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಹೆಬ್ಬಾಲೆ ಗ್ರಾಮದಲ್ಲಿ ರಸ್ತೆ ಮಾರ್ಜಿನ್ ಬಿಡದೇ ಕಟ್ಟಡ ನಿರ್ಮಾಣ ಮಾಡಿದ್ದು ಆ ಸಂಬಂದ ಅರೋಪಿ ಪಿ ಡಿ ಒ ವಿರುದ್ದ ಹೋರಾಡುತ್ತಿದ್ದ ಕಾರಣ ಪಿ ಡಿ ಒ ರವರು ಕುಮ್ಮಕಿ ನ ಮೇರೆಗೆ ಅರೋಪಿಯ ಮೇಲೆ ಹಲ್ಲೆ ಮಾಡಿರುತ್ತೇನೆ ಎಂದರೆ

ಸರಿಯಲ್ಲ.ನಾನು ಹಲ್ಲೆ ಮಾಡಿದ ನಂತರ ಅರೋಪಿ 11 ಗಂಟೆ 23 ನಿಮಿಷ 20 ಸೆಕೆಂಡ್ ಗೆ ಅಲ್ಲಿಂದ ಹೊರಟ ಕಾರಣ ಅರೋಪಿ 11 ಗಂಟೆ 30 ನಿಮಿಷಕ್ಕೆ ಸದರಿ ಸ್ಥಳದಲ್ಲಿ ಇರುವ ಪ್ರಮೇಯೆ ಇರಲಿಲ್ಲ ಎಂದರೆ ಸರಿಯಲ್ಲ. ಅರೋಪಿಗೂ ಈ ಪ್ರಕರಣಕ್ಕೂ ಹಾಗೂ ಮು.ಮಾ ಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ ಅರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

sd

ಪ್ರ ದ ನ್ಯಾ ದಂ, ಕುಶಾಲನಗರ